ಕರ್ನಾಟಕ ಅರಣ್ಯ ಇಲಾಖೆ

ಕ್ರಸಂ:ಬಿ2/ಜಿಎಫ್ಎಲ್/ಎಂಎಲ್‌ಪಿ/18.458/ವಿವ-111/2013-14

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬಾಗಲಕೋಟ ವಿಭಾಗ, ಬಾಗಲಕೋಟ
ದಿನಾಂಕ: 19/08/2021.

**EDS Query URGENT**

ಇವರಿಗೆ,

ಕಾರ್ಯ ನಿರ್ವಾಹಕ ಇಂಜಿನಿಯರರು, (ವಿ)
ಬೃಹತ್ ಕಾಮಗಾರಿ ವಿಭಾಗ,
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ನವನಗರ, ಬಾಗಲಕೋಟ.

ಮಾನ್ಯರೆ,

ವಿಷಯ: Diversion of 18.458 ha. of forest land in Sy. No. 6,7,8,205, 210 & 219 of Kallahalli, Sy.No. 152 of Siddapur, Sy.No. 13 of Ramateertha and Sy No. 9, 25, 36 & 42 of Jamkhandi village, Jamkhandi taluk, Bagalkot District for construction of new 110 KV D/C lin in the existing 110 KV Mahalingapur to Jamkhandi S/C line corridor for distance of 23.897 Km in favour of Executive Engineer (Electrical), Major Works Division, Karnataka Power Trasmission Corporation Limited (KPTCL), Bagalkot. **(Proposal No. FP/KA/TRANS/16981/2015.)**

ಉಲ್ಲೇಖ:
1) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುವರ ಪತ್ರ ಸಂಖ್ಯೆ: ಎ5(2).ಜಿಎಫ್ಎಲ್.ಸಿಆರ್-23/2015-16 ದಿನಾಂಕ: 12-03-2021.
2) ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವೃತ್ತ, ಬೆಳಗಾವಿರವರ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/ಎಎಫ್‌ಸಿ/ಟಿಎಲ್/ಬಿಜಿಕೆ/ಸಿಆರ್-14/14-15/20-21 ದಿನಾಂಕ: 01/04/2021.

— **** —

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ 220 ಕೆ.ವಿ. ವಿದ್ಯುತ್ ಸ್ವೀಕರಣ ಕೇಂದ್ರ ಮಹಾಲಿಂಗಪೂರದಿಂದ 110 ಕೆ.ವಿ. ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ ಮಾಡುವ ಕೆಲಸಕ್ಕೆ 18.458 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಉಪಯೋಗಿಸುವುದಕ್ಕೆ ಅನುಮೋದನೆ ಸಲುವಾಗಿ ಈಗಾಗಲೇ ಪ್ರಸ್ತಾವನೆಯನ್ನು ನೀವು ಸಲ್ಲಿಸಿದ್ದು, ಉಲ್ಲೇಖ (1)ರ ಪತ್ರದಡಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುವರು 1987ರಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ.

ಉಲ್ಲೇಖ (2)ರ ಪತ್ರದಡಿ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವೃತ್ತ, ಬೆಳಗಾವಿರವರು ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಹಿಂತಿರುಗಿಸಿದ್ದು, ಸದರಿ ಪತ್ರದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಅನುಮೋದನೆ ಪಡೆಯದೇ ವಿದ್ಯುತ್ ಲೈನ್ ಎಳೆದಿರುವುದಕ್ಕೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕಾನೂನಾತ್ಮಕ ಕ್ರಮ ಕೈಗೊಂಡ ಬಗ್ಗೆ ವರದಿ ನೀಡಲು ತಿಳಿಸಿರುತ್ತಾರೆ. ಕಾರಣ ಈ ಕುರಿತು ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಹಾಗೂ ಸದರಿ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕೈಗೊಂಡ ಕಾನೂನು ಕ್ರಮದ ಕುರಿತು ಕೂಡಲೇ ಈ ಕಚೇರಿಗೆ ವರದಿಯನ್ನು ಸಲ್ಲಿಸಲು ತಿಳಿಸುತ್ತಾ, ಸದರಿ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಹಿಂದಿರುಗಿಸಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟ ವಿಭಾಗ, ಬಾಗಲಕೋಟ.

LND Kannada letter